ಕರ್ನಾಟಕ ವಿಧಾನ ಸಭೆ, ಸಂಶೋಧನಾ ಮತ್ತು ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH
ಪತ್ರಿಕಾ ತುಣುಕುಗಳು
PAPER CLIPPINGS
ಇಲಾಖೆ / ವಿಷಯ: DEPARTMENT / SUBJECT:
ಪತ್ರಿಕೆಯ ಹೆಸರು : NAME OF THE NEWS PAPER :
ದಿನಾಂಕ : DATE: 5/12/19

# ಶಾಸಕರ ರಾಸಲೀಲೆ ಬ್ಲ್ಯಾಕ್‌ಮೇಲ್ ಆಸಾಮಿ ಸೆರೆ

ಸಂ.ಕ ಸಮಾಚಾರ ಬೆಂಗಳೂರು

ಶಾಸಕರ ಹನಿಟ್ರ್ಯಾಪ್ ಪ್ರಕರಣಕ್ಕೆ ಸಂಬಂಧಿಸಿದಂತೆ ಸಿಸಿಬಿ ಪೊಲೀಸರು ಮತ್ತೊರ್ವನನ್ನು ಬಂಧಿಸಿದ್ದಾರೆ.

ಬಂಧಿತನನ್ನು ವಾಗೀಶ್ ಎಂದು ಗುರುತಿಸಲಾಗಿದೆ. ಈ ಹನಿಟ್ರ್ಯಾಪ್ ಕಿಂಗ್‌ಪಿನ್ ರಾಘವೇಂದ್ರದ ಜೊತೆಗೂಡಿ ಹುಡುಗಿಯರನ್ನು ಕರೆಯಿಸಿಕೊಂಡು ಶಾಸಕರ ಬಳಿಗೆ ಕಳುಹಿಸುತ್ತಿದ್ದ. ತದನಂತರ ಶಾಸಕ ಮತ್ತು ಹುಡುಗಿ ಬೆತ್ತಲೆಯಾಗಿದ್ದ ಸಂದರ್ಭದಲ್ಲಿದ್ದ ವಿಡಿಯೋ ಮತ್ತು ಫೋಟೋಗಳನ್ನು ಶಾಸಕರಿಗೆ ತೋರಿಸಿ ಬ್ಲ್ಯಾಕ್‌ಮೇಲ್ ಮಾಡುತ್ತಿದ್ದ ಎಂದು ಪೊಲೀಸರು ತಿಳಿಸಿದ್ದಾರೆ.

ವಾಗೀಶ್ ಮತ್ತು ರಾಘವೇಂದ್ರ ದಿನಂಪ್ರತಿ ಯಾವ ಶಾಸಕರ ಸಂಪರ್ಕ ಮಾಡಬೇಕು ಎಂಬುದರ ಬಗ್ಗೆ ಯೋಚಿಸಿಕೊಂಡು ಅವರನ್ನು ಸಂಪರ್ಕಿಸುತ್ತಿದ್ದರು. ಶಾಸಕರ ಆಪ್ತ ಸಹಾಯಕರ ಮೂಲಕ ಮಾಹಿತಿ ರವಾನಿಸಿ ಕೆಲವೊಮ್ಮೆ ಆಪ್ತಸಹಾಯಕರಿಗೂ ಗೊತ್ತಾಗದಂತೆ ಐಷಾರಾಮಿ ಹೊಟೇಲ್‌ಗಳಿಗೆ ಕರೆಯಿಸಿಕೊಂಡು ಅಲ್ಲಿ ಹುಡುಗಿಯರನ್ನು ಕಳುಹಿಸಿ ತದನಂತರ ಹನಿಟ್ರ್ಯಾಪ್‌ಗೆ ಇಳಿಯುತ್ತಿದ್ದರು ಎಂದು ಹೇಳಲಾಗಿದೆ.

ಕೆಲವೊಮ್ಮೆ ಹುಡುಗಿಯರಿಗೆ ತಾವು ಹನಿಟ್ರ್ಯಾಪ್‌ಗೆ ಒಳಗಾಗುತ್ತಿದ್ದೇವೆ ಎಂಬ ಮಾಹಿತಿಯೂ ಇರುತ್ತಿರಲಿಲ್ಲ ಎನ್ನಲಾಗಿದೆ. ಹಲವಾರು ಶಾಸಕರು ಹನಿಟ್ರ್ಯಾಪ್‌ಗೆ ಒಳಗಾಗಿದ್ದ ಬಗ್ಗೆ ಗೊತ್ತಿದ್ದರೂ ರಾಘವೇಂದ್ರ ಮತ್ತು ವಾಗೀಶ್‌ನ ಬೆದರಿಕೆಗೆ ಬಗ್ಗಿಲ್ಲ. ಇನ್ನೂ ಕೆಲವರು ಲಕ್ಷಾನುಗಟ್ಟಲೇ ಹಣ ನೀಡಿದ್ದಾರೆ. ಆರೋಪಿಗಳು ಕೋಟಿಗಟ್ಟಲೇ ಹಣ ನೀಡುವಂತ ಬೇಡಿಕೆ ಇಡುತ್ತಿದ್ದರು. ತದನಂತರ ವ್ಯವಹಾರ ಕುದುರಿಸುತ್ತಿದ್ದರು ಎನ್ನಲಾಗಿದೆ.

ಹನಿಟ್ರ್ಯಾಪ್ ಬಗೆಗಿನ ವಿಡಿಯೋ ಮತ್ತು ಆಡಿಯೋ ರಾಘವೇಂದ್ರ ಬಹಿರಂಗಪಡಿಸಲ್ಲ ಎಂಬುದು ತನಿಖೆಯಲ್ಲಿ ಸ್ಪಷ್ಟವಾಗಿದೆ. ಆರೋಪಿಗಳಿಂದ ಆಯಾ ಶಾಸಕರ ಎದುರಾಳಿಗಳು ವಿಡಿಯೋ ಮತ್ತು ಆಡಿಯೋ ಪಡೆದು ರಾಜಕೀಯವಾಗಿ ಮೇಲುಗೈ ಸಾಧಿಸುವ ಸಲುವಾಗಿ ಸಾಮಾಜಿಕ ಜಾಲತಾಣದಲ್ಲಿ ಬಹಿರಂಗಪಡಿಸಿದ ಹಿನ್ನಲೆಯಲ್ಲಿ ಈ ಸಂಗತಿ ಬೆಳಕಿಗೆ ಬಂದಿದೆ. ರಾಜಕೀಯ ವೈಷಮ್ಯವೇ ಹನಿಟ್ರ್ಯಾಪ್ ಸಂಗತಿ ಬೆಳಕಿಗೆ ಬರಲು ಪ್ರಮುಖ ಕಾರಣ.

ಗದಗ ಜಿಲ್ಲೆಯ ಮಾಜಿ ಸಚಿವರೋರ್ವರ ಆಪ್ತ ಸಹಾಯಕ ಈ ಕೃತ್ಯದ ಮೂಲ ಸೂತ್ರಧಾರ. ಸಿಸಿಬಿ ಪೊಲೀಸರು ಆತನನ್ನು ಈಗಾಗಲೇ ಬಂಧಿಸಿ ಪರಪ್ಪನ ಅಗ್ರಹಾರದ ಸೆಂಟ್ರಲ್ ಜೈಲಿಗೆ ಕಳುಹಿಸಿದ್ದಾರೆ.